2. ಉಪ್ಪಿನಂಗಡಿ (ರಾಷ್ಟ್ರೀಯ ಹೆದ್ದಾರಿ ೪೮ ಕಿ.ಮೀ. ೨೯೮.೦೦ರಿಂದ) ಕಡಬ ಸುಬ್ರಹ್ಮಣ್ಯ ರಸ್ತೆಯ ಕಿ.ಮೀ.೦.೦೦ ರಿಂದ ೩೨೫೦ರ ವರೆಗೆ (ಮರ್ದಾಲ) ವರೆಗೆ ಜಿಲ್ಲಾ ಮುಖ್ಯ ರಸ್ತೆ ಹಾಗೂ ಮರ್ದಾಲದಿಂದ ಸುಬ್ರಹ್ಮಣ್ಯ ವರೆಗೆ ಕಿ.ಮೀ. ೦.೦೦ದಿಂದ ೧೭.೬೦ರ ವರೆಗೆ ರಾಜ್ಯ ಹೆದ್ದಾರಿಯಾಗಿದ್ದು ಇದರ ಒಟ್ಟು ಉದ್ದವು ೫೦.೧೦ ಕಿ.ಮೀ. ಆಗಿರುತ್ತದೆ. ಸುಬ್ರಹ್ಮಣ್ಯದಿಂದ (೦.೦೦ಕಿ.ಮೀ.) ೩.೫೦ ಕಿ.ಮೀ. ವರೆಗೆ ೨೦೦೦ ೨೦೦೧ನೇ ಸಾಲಿನಲ್ಲಿ ಮರು ಡಾಂಬರೀಕರಣ ಮಾಡಿದ್ದು, ಉಳಿದ ಭಾಗಕ್ಕೆ ಬಹಳ ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿರುತ್ತದೆ. ಈ ರಸ್ತೆಯ ಸುಬ್ರಹ್ಮಣ್ಯದಿಂದ ಮರ್ದಾಲ ವರೆಗೆ ಆಯ್ದ ಭಾಗಗಳಲ್ಲಿ ರಾಜ್ಯ ಹೆದ್ದಾರಿಯ ವಾರ್ಷಿಕ ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ೯.೧೦ ಕಿ.ಮೀ.ಗೆ ಮರು ಡಾಂಬರೀಕರಣಕ್ಕಾಗಿ ಅವಕಾಶ ಮಾಡಲಾಗಿದೆ.

ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳು.

2183(3237) ಶ್ರೀ ಅಂಗಾರ ಎಸ್. (ಸುಳ್ಯ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದೊಡ್ಡತೋಟ, ಕಕ್ಕುಜಡ್ಕ, ಪಾಜಪಳ್ಳ ರಸ್ತೆಯು ನಬಾರ್ಡ್ ಯೋಜನೆಯಡಿಯಲ್ಲಿ ಸೇರ್ಪಡೆಗೊಂಡಿದ್ದು ಕಾಮಗಾರಿಯನ್ನು ಪ್ರಾರಂಭಿಸದೇ ಇರಲು ಕಾರಣವೇನು?

2. ಈ ರಸ್ತೆಯ ಅಭಿವೃದ್ಧಿಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಹಿಂದಿನ ಅಧಿವೇಶನದಲ್ಲಿ ಪ್ರಶ್ನೆ ಸಂಖ್ಯೆ 1458ಕ್ಕೆ ಉತ್ತರಿಸಿರುವಂತೆ ಈ ಕಾಮಗಾರಿಯ ನಬಾರ್ಡ್ ಆರ್‌ಐಡಿಎಫ್- 4ರಲ್ಲಿ ರೂ. 36.50 ಲಕ್ಷಕ್ಕೆ ಮಂಜೂರಾಗಿದ್ದು 4 ಬಾರಿ ಟೆಂಡರ್ ಕರೆದಿದ್ದು ಟೆಂಡರ್‌ನ ಮೊತ್ತವು ಅತ್ಯಧಿಕವಿದ್ದು ಈ ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಬೇಕಿರುವುದರಿಂದ ಕಾಮಗಾರಿಯನ್ನು ಕೈಬಿಡಲಾಗಿದೆ.

2. ಈ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಹೊಸದಾಗಿ ಸಚಿವ ಸಂಪುಟ ಉಪಸಮಿತಿಯಲ್ಲಿ ಪ್ರಸ್ತಾವಿಸಿ ಮುಂದಿನ ಆರ್‌ಐಡಿಎಫ್ ಯೋಜನೆಯಡಿ ನಬಾರ್ಡ್‌ನಿಂದ ಅನುಮೋದನೆ ಪಡೆದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಸೇತುವೆ ಕಾಮಗಾರಿ.

2184(2706) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಹೊಳೆಗೆ ಸೇತುವೆ ನಿರ್ಮಿಸಲಾಗುತ್ತಿದೆ. ಅವು ಯಾವುವು ಹಾಗೂ ಇವುಗಳಿಗೆ ತಗಲುವ ವೆಚ್ಚವೆಷ್ಟು; (ವಿವರ ನೀಡುವುದು)